62

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\79\2018\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:22/04/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

ವಿಷಯ: ಸರ್ಕಾರಿ \ ಸಾರ್ವಜನಿಕ ನೌಕರರಾದ \ ನೌಕರರಾಗಿದ್ದ ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ಯರ್ರಂವಾರಿಪಲ್ಲಿ ಗ್ರಾಮ ಪಂಚಾಯತ್‌ನ 1)ಅಧ್ಯಕ್ಷರಾಗಿದ್ದ ಶ್ರೀಮತಿ.ರಾಧಮ್ಮ [ಹಾಲೀ ಪಂಚಾಯತ್ ಸದಸ್ಯರು] ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದ 2)ಶ್ರೀ.ಎನ್.ರಾಮಪ್ಪ, 3) ಶ್ರೀ.ಎನ್.ನಾಗರಾಜ ಮತ್ತು 4)ಶ್ರೀ.ಎಸ್.ಬೈರೆಡ್ಡಿ ರವರ ದುರ್ನಡತೆಯ ಬಗ್ಗೆ.

**********

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕ್ ಚೇಳೂರು ಹೋಬಳಿ ಮಲಗಲ್ಲು ಅಂಚೆ ಊದವಾರಪಲ್ಲಿ ಗ್ರಾಮ ನಿವಾಸಿಯಾದ ಶ್ರೀ.ವಿ.ರಾಮಕೃಷ್ಣಪ್ಪ ಬಿನ್ ಲೇಟ್.ಆಂಜನೇಯಲು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ಯರ್ರಂವಾರಿಪಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ.ಎಸ್.ಶಾಂತಕುಮಾರಿ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:**– ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಯರ್ರಂವಾರಿಪಲ್ಲಿ ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದಂತೆ, ಹದಿಮೂರನೇ (13ನೇ) ಹಣಕಾಸು ಯೋಜನೆ ಅಡಿ ದಿ:01/04/14 ರಿಂದ 17/07/2015 ರವರೆಗೆ ಎಷ್ಟು ಹಣ ಬಂದಿದೆ? ಬಂದಿರುವ ಹಣವನ್ನು ಯಾವ ಕಾಮಗಾರಿಗಳಿಗೆ ಖರ್ಚು ಮಾಡಿದೆ? ಕ್ರಿಯಾ ಯೋಜನೆ, ಬ್ಯಾಂಕ್ ಫಾರ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ಕೇಳಿದಾಗ್ಯೂ ಎದುರುದಾರರು ಬ್ಯಾಂಕ್ ಫಾರ್ ಶೀಟನ್ನು ಮಾತ್ರ ಕೊಟ್ಟಿದ್ದಾರೆ. ಆದರೆ, ಇದಕ್ಕೆ ಸಂಬಂಧಿಸಿದ ನಗದು ವಹಿ ಮತ್ತು ವೋಚರ್‌ಗಳನ್ನು ನೀಡಿಲ್ಲ. ದಾಖಲೆಗಳನ್ನು ನೀಡಿದರೆ ಅಕ್ರಮ ಬಯಲಿಗೆ ಬರುತ್ತದೆಂದು ದಾಖಲೆಗಳನ್ನು ಗೌಪ್ಯವಾಗಿ ಇರಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದಾಗಿ ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸಾರ್ವಜನಿಕ ಮಾಹಿತಿ ಅಧಿಕಾರಿಯಾದ ತಾವು ಕಛೇರಿಯಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿ, ಕೇಳಿದ ಮಾಹಿತಿಗೆ ಸಂಬಂಧಿಸಿದಂತೆ 23 ಪುಟಗಳ ಮಾಹಿತಿಯನ್ನು ಅರ್ಜಿದಾರರಿಗೆ ದಿ:18/02/17ರ ಪತ್ರದೊಂದಿಗೆ ದೂರುದಾರರಿಗೆ ನೋಂದಣಿ ಅಂಚೆ ಮೂಲಕ ಕಳುಹಿಸಿದ್ದು, ದೂರುದಾರರು ದಿ:01/04/14 ರಿಂದ 17/07/15ರವರೆಗಿನ ಮಾಹಿತಿಯನ್ನು ಕೇಳಿ ತಮಗೆ ಅರ್ಜಿಯನ್ನು ಸಲ್ಲಿಸಿಲ್ಲ. ದೂರುದಾರರ ಆಪಾದನೆಗಳು ಸತ್ಯಕ್ಕೆ ದೂರವಾಗಿದೆಯೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ಎದುರುದಾರರು ಕಳುಹಿಸಿರುವ ಮಾಹಿತಿಯಲ್ಲಿ ಅನುದಾನಗಳಿಗೆ ಖರ್ಚು ಮಾಡಿರುವ ವೋಚರ್‌ಗಳನ್ನು ನೀಡಿಲ್ಲ, ಬ್ಯಾಂಕ್ ಘಾರ್ ಶೀಟ್ ಪ್ರಕಾರ 13ನೇ ಹಣಕಾಸು ಯೋಜನೆ ಅಡಿ ಸರ್ಕಾರದಿಂದ ಪಂಚಾಯತ್‌ಗೆ ದಿ:19/08/14 ರಿಂದ 31/08/15 ರವರೆಗೆ ₹21,29,792/–ಗಳು ಜಮಾ ಆಗಿದ್ದು, ಸದರಿ ಹಣ ಪೂರ್ತಿ ಖರ್ಚಾಗಿದೆಯೆಂದು ಕಂಡು ಬಂದಿದೆ. ಸದರಿ ಖರ್ಚಿಗೆ ಸಂಬಂಧಪಟ್ಟ ವೋಚರ್‌ಗಳನ್ನು ಎದುರುದಾರರಿಂದ ಪಡೆದುಕೊಂಡು ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ವಿಸ್ತೃತ ವರದಿಯನ್ನು ತಾವು ನೀಡಲು ಬಯಸುವುದಾಗಿ ಹೇಳಿದ್ದಾರೆ.

5. ದೂರುದಾರರು ಆಪಾದಿಸಿದಂತೆ ಹಣದ ಅವ್ಯವಹಾರ ನಡೆದಿರುವ ಸಾಧ್ಯತೆ ಕಂಡು ಬಂದಿದ್ದರಿಂದ, ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಟ್ಟು, 2014–15ನೇ ಸಾಲಿನಲ್ಲಿ ಯರ್ರಂವಾರಿಪಲ್ಲಿ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸಿದ ಅಧ್ಯಕ್ಷರಾದ ಶ್ರೀಮತಿ.ರಾಧಮ್ಮ (ಹಾಲೀ ಪಂಚಾಯತ್ ಸದಸ್ಯರು) ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ.ಎನ್.ರಾಮಪ್ಪ, ಶ್ರೀ.ನಾಗರಾಜು ಹಾಗೂ ಶ್ರೀ.ಎಸ್.ಬೈರೆಡ್ಡಿ ರವರುಗಳನ್ನು ಕ್ರಮವಾಗಿ, 1 ರಿಂದ 4ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ಆಕ್ಷೇಪಣೆಗಳನ್ನು ಕೇಳಲಾಯಿತು.

6. ಒಂದನೇ (1ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

69

BD/79/18

ತಮ್ಮ ಅವಧಿಯಲ್ಲಿ ತಯಾರಿಸಿದ ಕ್ರಿಯಾ ಯೋಜನೆ, ಹಣ ಖರ್ಚಾಗಿರುವುದಕ್ಕೆ ಡಿ.ಸಿ ಬಿಲ್ ಮತ್ತು ಪಾಸ್ ಶೀಟನಲ್ಲಿ ತಾಳೆಯಾಗಿದ್ದು, ಬಿಲ್ಲುಗಳು ಸರಿಯಾಗಿದೆಯೆಂದು ದಾಖಲೆಗಳಿಂದ ತಿಳಿದು ಬಂದಿದೆಯೆಂದು ಹೇಳಿದ್ದಾರೆ.

7. ಎರಡರಿಂದ 4ನೇ ಎದುರುದಾರರುಗಳು ತಮ್ಮ ಆಕ್ಷೇಪಣೆಗಳಲ್ಲಿ, ದೂರಿನ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ಯರ್ರಂವಾರಿಪಲ್ಲಿ ಗ್ರಾಮ ಪಂಚಾಯತ್‌ನ 13ನೇ ಹಣಕಾಸು ಯೋಜನೆಯಡಿ ಸರ್ಕಾರದಿಂದ ಮಂಜೂರಾಗುವ ಅನುದಾನವು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್, ಅಡ್ಡಗಲ್ ಶಾಖೆಯ ಖಾತೆ ಸಂ:10517100005476ಗೆ ಜಮಾ ಆಗುತ್ತಿದೆಯೆಂದು ಬ್ಯಾಂಕ್ ತಃಖ್ತೆಯಲ್ಲಿ ಕಂಡು ಬಂದಿದೆ. 2014ನೇ ಏಪ್ರಿಲ್ ತಿಂಗಳಿನಿಂದ 2015, ಫೆಬ್ರವರಿ ತಿಂಗಳಿನವರೆಗೆ ಸದರಿ ಯೋಜನೆ ಅಡಿ ಸದರಿ ಖಾತೆಗೆ ಈ ಕೆಳಗಿನ ದಿನಾಂಕಗಳಂದು ಹಣ ಜಮಾ ಆಗಿರುವುದು ಕಂಡು ಬಂದಿದೆ –

| **ಕ್ರ. ಸಂ.** | **ದಿನಾಂಕ** | **ಮೊತ್ತ ₹ ಗಳಲ್ಲಿ** |
|---|---|---|
| 1 | 19/04/14 | 400842.00 |
| 2 | 20/05/14 | 321682.00 |
| 3 | 22/05/14 | 1685.00 |
| 3 | 19/08/14 | 328749.00 |
| 4 | 20/01/15 | 1298.00 |
| 5 | 28/01/15 | 2968.00 |
| 6 | 02/02/15 | 3978.00 |
| **ಒಟ್ಟು ಮೊತ್ತ** | | **1061202.00** |

2) ಸದರಿ ಅವಧಿಯಲ್ಲಿ ಸದರಿ ಖಾತೆಯಿಂದ ಈ ಕೆಳಗಿನ ದಿನಾಂಕಗಳಂದು ಹಣ ಖರ್ಚು ಮಾಡಿರುವುದು ಬ್ಯಾಂಕ್ ತಃಖ್ತೆ, ನಗದು ವಹಿ ಮತ್ತು ಡಿಸಿ ಬಿಲ್ಲಿನ ವಹಿಯ ಪ್ರತಿಗಳಲ್ಲಿ ಕಂಡು ಬಂದಿದೆ –

| ಕ್ರ.ಸಂ. | ಹೆಸರು ಶ್ರೀ.\ ಶ್ರೀಮತಿ. | ಚೆಕ್ ಸಂಖ್ಯೆ & ದಿನಾಂಕ | ಮೊತ್ತ |
|---|---|---|---|
| 1 | ಸಂತೋಷ್ ಎಲೆಕ್ಟ್ರಿಕಲ್ಸ್ & | 825844, 25/04/14 | 65450.00 |

| | | | |
|---|---|---|---|
| | ಇಂಜಿನಿಯರಿಂಗ್ ವರ್ಕ್ಸ್ | | |
| 2 | –"– | 825845, 25/04/14 | 66550.00 |
| 3 | ಎಸ್‌ಬಿ–4563 | 825843, 26/04/14 | 75650.00 |
| 4 | ಬಾಬು.ಡಿ.ಕೆ | 825846, 05/05/14 | 47430.00 |
| 5 | ಬಾಬು.ಡಿ.ಕೆ | 825847, 16/05/14 | 61400.00 |
| 6 | ಜಿ.ಶ್ರೀನಿವಾಸ ರೆಡ್ಡಿ | 825848, 16/05/14 | 6150.00 |
| 7 | ಎಸ್‌ಬಿ–5233 | 825850, 26/05/14 | 4917.00 |
| 8 | ಎಸ್‌ಬಿ–5392 | 4502, 28/05/14 | 6000.00 |
| 9 | ಭಾರ್ಗವ ಎಂಟರ್‌ಪ್ರೈಸಸ್ | 4503, 28/05/14 | 6500.00 |
| 10 | ಜಗದೀಶ್ ಎಲೆಕ್ಟ್ರಿಕಲ್ಸ್ | 4501, 14/05/14 | 11921.00 |
| 11 | ಸತೀಶ್ ರೆಡ್ಡಿ | 825849, 09/05/14 | 5329.00 |
| 12 | ಸಂತೋಷ್ ಎಲೆಕ್ಟ್ರಿಕಲ್ಸ್ & ಇಂಜಿನಿಯರಿಂಗ್ ವರ್ಕ್ಸ್ | 4504, 09/06/14 | 65460.00 |
| 13 | –"– | 4505, 09/06/14 | 68390.00 |
| 14 | ಜಗದೀಶ್ ಎಲೆಕ್ಟ್ರಿಕಲ್ಸ್ | 4507, 09/06/14 | 80496.00 |
| 15 | ಜಗದೀಶ್ ಎಲೆಕ್ಟ್ರಿಕಲ್ಸ್ | 4508, 09/06/14 | 41158.00 |
| 16 | ಭಾರ್ಗವ ಎಂಟರ್‌ಪ್ರೈಸಸ್ | 4509, 12/07/14 | 16650.00 |
| 17 | ಎಸ್‌ಬಿ–5398 | 4510, 12/07/14 | 2682.00 |
| 18 | ಬಾಬು.ಡಿ.ಕೆ | 4511, 14/07/14 | 64832.00 |
| 19 | ಬಾಬು.ಡಿ.ಕೆ | 4512, 18/07/14 | 59860.00 |
| 20 | ಮುನಿನಾರಾಯಣ | 4513, 21/07/14 | 80670.00 |
| 21 | ಭಾರ್ಗವ ಎಂಟರ್‌ಪ್ರೈಸಸ್ | 4514, 22/07/14 | 6650.00 |
| 22 | –– | 4515, 22/07/14 | 20240.00 |
| 23 | ಮುನಿನಾರಾಯಣ | 4516, 25/07/14 | 9450.00 |
| 24 | ಜಗದೀಶ್ ಎಲೆಕ್ಟ್ರಿಕಲ್ಸ್ | 4517, 11/08/14 | 27556.00 |
| 25 | ಬಾಬು.ಡಿ.ಕೆ | 4518, 11/08/14 | 18814.00 |
| 26 | ಸಂತೋಷ್ ಎಲೆಕ್ಟ್ರಿಕಲ್ಸ್ & ಇಂಜಿನಿಯರಿಂಗ್ ವರ್ಕ್ಸ್ | 4519, 13/08/14 | 58650.00 |
| 27 | –"– | 4520, 14/08/14 | 62460.00 |
| 28 | ಮುನಿನಾರಾಯಣ | 4521, 12/08/14 | 27150.00 |
| 29 | ಜಗದೀಶ್ ಎಲೆಕ್ಟ್ರಿಕಲ್ಸ್ | 4522, 16/08/14 | 65650.00 |
| 30 | ಜಗದೀಶ್ ಎಲೆಕ್ಟ್ರಿಕಲ್ಸ್ | 4523, 16/08/14 | 60450.00 |
| 31 | ಎಂ.ಜಿ.ವಿಜಯಕುಮಾರ್ | 4524, 01/10/14 | 36741.00 |
| 32 | ಕೃಷ್ಣಾರೆಡ್ಡಿ | 4525, 01/10/14 | 6000.00 |

BD/79/18



71

| | | | |
|---|---|---|---|
| 33 | ಜಗದೀಶ್ ಎಲೆಕ್ಟ್ರಿಕಲ್ಸ್ | 4526, 27/10/14 | 54954.00 |
| 34 | ಬಾಬು.ಡಿ.ಕೆ | 4527, 17/11/14 | 60060.00 |
| 35 | ನರಸಿಂಹಪ್ಪ | 4528, 17/11/14 | 3250.00 |
| 36 | ಸಿ.ಚಂದ್ರ | 4529, 17/11/14 | 5000.00 |
| 37 | ಜಿ.ಎ.ಮಂಜುನಾಥ | 4530, 17/11/14 | 5000.00 |
| 38 | ಬಿ.ಟಿ.ವೆಂಕಟರಮಣ | 4531, 17/11/14 | 5000.00 |
| 39 | ಮಂಜುನಾಥ | 4532, 17/11/14 | 3000.00 |
| 40 | ನರಸಿಂಹಪ್ಪ | 4533, 17/11/14 | 3000.00 |
| 41 | ಗೋವಿಂದಪ್ಪ.ವೈ.ವಿ | 4534, 01/12/14 | 5000.00 |
| 42 | ಬಿ.ಕೆ.ರವಿ | 4535, 02/12/14 | 5000.00 |
| 43 | ಜಗದೀಶ್ ಎಲೆಕ್ಟ್ರಿಕಲ್ಸ್ | 4536, 10/12/14 | 10824.00 |
| 44 | ಮುನಿನಾರಾಯಣ | 4538, 12/12/14 | 25000.00 |
| 45 | ಬಾಬು.ಡಿ.ಕೆ | 4539, 08/01/15 | 15000.00 |
| **ಒಟ್ಟು ಮೊತ್ತ** | | | 14,37,394.00 |

3) ಹಿಂದಿನ ಖಂಡಿಕೆ–2ರ ಖರ್ಚುಗಳಿಗೆ ಸಂಬಂಧಿಸಿದಂತೆ, ಕ್ರಮ ಸಂಖ್ಯೆ–23 ರಿಂದ 45 ಖರ್ಚುಗಳಿಗೆ ಡಿಸಿ ಬಿಲ್ಲಿನ ವಹಿ ಮತ್ತು ನಗದು ವಹಿಯ ಪ್ರತಿ ಮಾತ್ರ ಲಭ್ಯವಿದೆ. ಕ್ರಮ ಸಂಖ್ಯೆ–1 ರಿಂದ 22 ಖರ್ಚುಗಳಿಗೆ ನಗದು ವಹಿಯ ಪ್ರತಿ ಮಾತ್ರ ಲಭ್ಯವಿದೆ;

4) ಕ್ರಮ ಸಂಖ್ಯೆ–36 ರಿಂದ 40 ಮತ್ತು 42 ಖರ್ಚುಗಳ ಪೈಕಿ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿದ್ಯಾರ್ಥಿಗಳಿಗೆ (ಕ್ರಮ ಸಂಖ್ಯೆ–36 ರಿಂದ 38 ಮತ್ತು 42) ಮತ್ತು ಅಂಗವಿಕಲರಿಗೆ (ಕ್ರಮ ಸಂಖ್ಯೆ–39 ಮತ್ತು 40) ಪ್ರೋತ್ಸಾಹ ಧನ ಹಾಗೂ ಕ್ರಮ ಸಂಖ್ಯೆ–41ರ ಖರ್ಚು ಡಾ॥ಬಿ.ಆರ್.ಅಂಬೇಡ್ಕರ್ ರವರ ಪುಣ್ಯ ತಿಥಿಯ ಅಂಗವಾಗಿ ಪಲ್ಲಕ್ಕಿ ಮೆರವಣಿಗೆ ಬಾಬ್ತು ಮಾಡಿದ ಖರ್ಚುಗಳಾಗಿವೆ;

5) ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ–ಗ್ರಾಅಪ 440 ಗ್ರಾಪಂಅ 2015 ದಿನಾಂಕ:22/07/15ರನ್ವಯ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಸಹಾಯ ಧನವನ್ನು ವಾರ್ಷಿಕವಾಗಿ ಗರಿಷ್ಟ ₹1,500/–ಗಳನ್ನು ಮಾತ್ರ ನೀಡಲು ಅವಕಾಶವಿದೆ. ಆದರೆ, ಸದರಿ ಪ್ರಕರಣದಲ್ಲಿ 4 ವಿದ್ಯಾರ್ಥಿಗಳಿಗೆ ತಲಾ ₹5,000/– ಸಹಾಯ ಧನವನ್ನು ನೀಡಿರುವುದು ಕಂಡು ಬಂದಿದ್ದು, ಸದರಿ ಹಣ ಪಾವತಿ ಸುತ್ತೋಲೆಯಲ್ಲಿನ ನಿರ್ದೇಶನಗಳಿಗೆ ವಿರುದ್ಧವಾಗಿದೆ. ಮುಂದುವರೆದು, ಸದರಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ ಪಂಚಾಯತ್ ತೀರ್ಮಾನ, ಸದರಿ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಶಾಲಾ \ ಕಾಲೇಜು ಪ್ರಮಾಣ ಪತ್ರಗಳು, ಮುಂತಾದ ದಾಖಲೆಗಳಿಲ್ಲ;

6) ಅಂಗವಿಕಲ ಪ್ರೋತ್ಸಾಹ ಧನ ಬಾಬ್ತು ಒಟ್ಟು ₹6,000/–ಗಳನ್ನು ಖರ್ಚು ಮಾಡಿದ್ದು, ಸದರಿ ಅಂಗವಿಕಲರು ಎಂದು ಹೇಳಲಾದ ಶ್ರೀ.ಮಂಜುನಾಥ ಬಿನ್ ಲೇಟ್.ಈರಪ್ಪ ಮತ್ತು ಶ್ರೀ.ನರಸಿಂಹಪ್ಪ ಬಿನ್ ಕದಿರಪ್ಪ ರವರ

ಅಂಗವೈಕಲ್ಯ ವೈದ್ಯಕೀಯ ಪ್ರಮಾಣ ಪತ್ರ ಲಭ್ಯವಿಲ್ಲ. ಮುಂದುವರೆದು, ಸದರಿಯವರುಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ ಪಂಚಾಯತ್ ತೀರ್ಮಾನ ಲಭ್ಯವಿಲ್ಲ;

7) ಕ್ರಮ ಸಂಖ್ಯೆ–41 ಖರ್ಚಿಗೆ ಸಂಬಂಧಿಸಿದಂತೆ, ಪಂಚಾಯತ್ ತೀರ್ಮಾನ ಲಭ್ಯವಿಲ್ಲ ಮತ್ತು ಮೇಲೆ ಹೇಳಿದ ಸುತ್ತೋಲೆಯಲ್ಲಿ ಸದರಿ ಖರ್ಚಿಗೆ ಅವಕಾಶವಿಲ್ಲ;

8) ಉಳಿದಂತೆ ಕ್ರಮ ಸಂಖ್ಯೆ–1 ರಿಂದ 35 ಮತ್ತು 42 ರಿಂದ 45ರ ಖರ್ಚುಗಳಿಗೆ ಸಂಬಂಧಿಸಿದಂತೆ, ಸಂಸ್ಥೆಗಳಿಂದ ಸಾಮಗ್ರಿಗಳನ್ನು ಖರೀದಿಸಿದ ಬಾಬ್ತು ದರ ಪಟ್ಟಿ, ಖರೀದಿ ಬಿಲ್ಲು, ರಸೀದಿ, ವೋಚರ್ ಮುಂತಾದ ದಾಖಲೆಗಳಿಲ್ಲ. ಕೆಎಫ್‌ಸಿ ಪರಿಚ್ಛೇದ 17ರ ಪ್ರಕಾರ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧ್ಯವಿಲ್ಲವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ)ರನ್ವಯ ₹5,000/– ಮೀರಿದ ₹1,00,000/–ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಮಾಡತಕ್ಕದ್ದು. ಕೆಎಫ್‌ಸಿ ಪರಿಚ್ಛೇದ 57ರನ್ವಯ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕು;

9) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಜೆಟ್) ನಿಯಮಾವಳಿಗಳು, 1995ರ ನಿಯಮ 20ರನ್ವಯ ಪ್ರತಿ ಖರ್ಚಿಗೆ ಸಂಬಂಧಿಸಿದಂತೆ ಬಿಲ್ ಅಥವಾ ವೋಚರ್‌ಗಳು ಇರಬೇಕೆನ್ನುವುದು ಕಡ್ಡಾಯವಾಗಿದೆ. ಆ ರೀತಿಯ ಬಿಲ್ ಮತ್ತು ವೋಚರ್‌ಗಳಿಲ್ಲ. ಹಿಂದಿನ ಖಂಡಿಕೆ–2ರಲ್ಲಿ ಹೇಳಿದ ಖರ್ಚುಗಳಿಗೆ ಸಂಬಂಧಿಸಿದಂತೆ, ಚೆಕ್‌ಗಳನ್ನು ನೀಡಿದ ಬಗ್ಗೆ ಚೆಕ್‌ಗಳನ್ನು ಪಡೆದವರಿಂದ ಸ್ವೀಕೃತಿಯನ್ನು ಪಡೆಯ ಬೇಕೆಂದು ನಿಯಮ, 26ರನ್ವಯ ಕಡ್ಡಾಯವಾಗಿದೆ. ಸದರಿ ಚೆಕ್‌ಗಳನ್ನು ಆಯಾಯ ವ್ಯಕ್ತಿ \ ಸಂಸ್ಥೆ ಹೆಸರಿಗೆ ನೀಡಿದ ಬಗ್ಗೆ ಸ್ವೀಕೃತಿಯನ್ನು ಪಡೆದ ಬಗ್ಗೆ ದಾಖಲೆಯಿಲ್ಲ. ಕಾರಣ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಜೆಟ್) ನಿಯಮಾವಳಿಗಳು, 1995ರ ನಿಯಮ 20 ಮತ್ತು 26ರ ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

10) ಹಿಂದೆ ಹೇಳಿದ ಖಂಡಿಕೆಗಳಲ್ಲಿನ ಕಾರಣಗಳಿಗಾಗಿ ಒಟ್ಟು ₹14,37,394.00 ಮೊತ್ತವು ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ;

11) ದೂರಿನ 2ನೇ ಎದುರುದಾರರು ದಿನಾಂಕ:01/04/14 ರಿಂದ 13/08/14ರವರೆಗೆ, 3ನೇ ಎದುರುದಾರರು 14/08/14 ರಿಂದ 31/12/14ರವರೆಗೆ ಮತ್ತು 4ನೇ ಎದುರುದಾರರು ದಿನಾಂಕ:01/01/15 ರಿಂದ 31/03/15ರವರೆಗೆ ಯರ್ರಂವಾರಿಪಲ್ಲಿ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿರುವುದು ಕಂಡು ಬಂದಿದೆ. ಮೇಲೆ ಹೇಳಿದ ದುರುಪಯೋಗವಾದ ಮೊತ್ತದ ಪೈಕಿ ಸದರಿಯವರುಗಳ ಕರ್ತವ್ಯದ ಅವಧಿಯಲ್ಲಿ ಕ್ರಮವಾಗಿ, ₹10,06,005/–, ₹4,16,389/– ಮತ್ತು ₹15,000/–ಗಳು ದುರುಪಯೋಗವಾಗಿದ್ದು, ಸದರಿ ಮೊತ್ತಗಳಿಗೆ 2 ರಿಂದ 4ನೇ ಎದುರುದಾರರುಗಳು ಜವಾಬ್ದಾರರಾಗಿದ್ದಾರೆ. ಸದರಿ ಎಲ್ಲಾ ಹಣದ ವ್ಯವಹಾರಗಳು ದೂರಿನ 1ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಆಗಿರುವುದು ದಾಖಲೆಗಳಿಂದ ಸ್ಪಷ್ಟವಾಗಿ

ಕಂಡು ಬಂದಿದೆ. ಆದ್ದರಿಂದ, ಸದರಿ ಒಟ್ಟು ಮೊತ್ತ ₹14,37,394.00 ಗಳಿಗೆ 1ನೇ ಎದುರುದಾರರು ಜವಾಬ್ದಾರರಾಗಿದ್ದಾರೆ.

9. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ರಿಂದ 4ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ. ಕಾರಣ, ಸದರಿ 1 ರಿಂದ 4ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

10. ಒಂದನೇ (1ನೇ) ಎದುರುದಾರರು ಯರ್ರಂವಾರಿಪಲ್ಲಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿದ್ದು, ಹಾಲೀ ಸದಸ್ಯರಾಗಿರುವುದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿದೆ.

11. ಅದಲ್ಲದೆ 2 ರಿಂದ 4ನೇ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 2 ರಿಂದ 4ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ **ತಿಳಿಸಲು ಹೇಳಿದೆ.**

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**